# ಅಧ್ಯಾಪಕರು ಮತ್ತು ಸರ್ಕಾರ

ರಶ್ಮಿ ಶುಕ್ಲ ಶರ್ಮ

ನಾವು ಅಧ್ಯಾಪಕರ ಬಗ್ಗೆ ಯೋಚಿಸಿದಾಗಲೆಲ್ಲ ವಿದ್ಯಾರ್ಥಿಗಳು, ತರಗತಿಗಳು ಮತ್ತು ಶಾಲೆಗಳ ಚಿತ್ರಗಳು ನಮ್ಮ ಮನಸ್ಸಿನಲ್ಲಿ ಚಿಮ್ಮಿಬಿಡುತ್ತವೆ. ಅಧ್ಯಾಪಕರು ಪಾಠ ಮಾಡುವ ವಿದ್ಯಾರ್ಥಿಗಳ ಸಂಖ್ಯೆಯ ಬಗ್ಗೆ, ಪೀಠೋಪಕರಣಗಳ ಬಗ್ಗೆ, ತರಗತಿಗಳಲ್ಲಿರುವ ಪಾಠೋಪಕರಣಗಳ ಬಗ್ಗೆ, ಸಣ್ಣ ಅಥವಾ ದೊಡ್ಡ ಶಾಲೆಗಳ ವಿಧಗಳ ಬಗ್ಗೆ, ಇಷ್ಟದ ಬಗ್ಗೆ ನಾವು ಮಾತಾಡುತ್ತೇವೆ. ಇವೆಲ್ಲ ಅಧ್ಯಾಪಕರು ಕೆಲಸ ಮಾಡುವ ಸಂದರ್ಭ ಎಂದು ನಾವು ಮನಗಂಡಿದ್ದೇವೆ. ಅಧ್ಯಾಪಕರ ಬೋಧನೆಯ ಮೇಲೆ ಈ ಸಂದರ್ಭಗಳೆಲ್ಲ ಪ್ರಭಾವ ಬೀರುತ್ತವೆ ಎನ್ನುವುದೂ ನಮಗೆ ಗೊತ್ತಿದೆ. ಪಠ್ಯಕ್ರಮ, ಪಠ್ಯಪುಸ್ತಕಗಳು, ವಿದ್ಯಾರ್ಥಿ ಮೌಲ್ಯಮಾಪನ ವ್ಯವಸ್ಥೆ, ಅಧ್ಯಾಪಕರ ತರಬೇತಿ, ಅದೇರೀತಿ ವಿದ್ಯಾರ್ಥಿಗಳ ಹಿನ್ನೆಲೆಗಳೆಲ್ಲ ಅಧ್ಯಾಪಕರ ಬೋಧನೆ–ಕಲಿಕೆಯ ಪ್ರಕ್ರಿಯೆಯ ವಿಧಾನದ ಮೇಲೆ ಅಗಾಧ ಪ್ರಭಾವ ಬೀರುತ್ತದೆ ಎನ್ನುವುದರ ಅರಿವೂ ನಮಗೆ ಇದೆ.

ನಾವು ಸರಕಾರದ ಬಗ್ಗೆ ಮತ್ತು ಅದು ಅಧ್ಯಾಪಕರ ಮೇಲೆ ಬೀರುವ ಪರಿಣಾಮಗಳ ಬಗ್ಗೆ ನಾವು ಅಷ್ಟೇನೂ ತಲೆಕೆಡಿಸಿಕೊಳ್ಳುವುದಿಲ್ಲ. ಸರಕಾರ ಪಠ್ಯಕ್ರಮ ಮತ್ತು ಪಠ್ಯಪುಸ್ತಕ, ಅಧ್ಯಾಪಕರ ತರಬೇತಿ, ವಿದ್ಯಾರ್ಥಿ ಮೌಲ್ಯಮಾಪನ ವ್ಯವಸ್ಥೆ ಇತ್ಯಾದಿಗಳನ್ನು ರೂಪಿಸುವ ಮೂಲಕ ಬೋಧನೆ–ಕಲಿಕೆಯ ಪ್ರಕ್ರಿಯೆ ಹೇಗೆ ಇರಬೇಕೆಂದು ಚೌಕಟ್ಟನ್ನು ಹಾಕಿಕೊಡುತ್ತದೆ ಎನ್ನುವುದು ನಮಗೆ ಗೊತ್ತೇ ಇದೆ.

ಈ ನೀತಿಗಳೆಲ್ಲ ಸ್ಪಷ್ಟವಾಗಿ ಅಧ್ಯಾಪಕರ ಮೇಲೆ ಪ್ರಭಾವ ಬೀರುತ್ತವೆ. ಇದರ ಬಗ್ಗೆ ಮುಖ್ಯವಾಗಿ ಶಿಕ್ಷಣ ತಜ್ಞರಲ್ಲಿ, ಅಧ್ಯಾಪಕರಲ್ಲಿ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಜನರಲ್ಲಿ ಮುಕ್ತ ಸಂವಾದಗಳು ನಡೆಯುತ್ತವೆ. ಅಧ್ಯಾಪಕರ ಸೇವೆ ಮತ್ತು ದುಡಿಮೆಯ ಷರತ್ತುಗಳನ್ನು ರೂಪಿಸುವಲ್ಲಿ ಸರಕಾರ ಪ್ರಮುಖ ಪಾತ್ರ ನಿರ್ವಹಿಸುತ್ತದೆ. ಅಧ್ಯಾಪಕರಲ್ಲಿ ಹೆಚ್ಚಿನವರು ಸರಕಾರಿ ಸೇವೆಯಲ್ಲಿ ಇರುವವರು. ಅಥವಾ ಇನ್ನು ಕೆಲವು ಪ್ರಕರಣಗಳಲ್ಲಿ ಪಂಚಾಯತ್ ನೌಕರರಾಗಿರುತ್ತಾರೆ (ನಮ್ಮ ಸಂವಿಧಾನದ ಪ್ರಕಾರ ಪಂಚಾಯತ್ ಎಂದರೆ 'ಸ್ಥಳೀಯಾಡಳಿತ ಸಂಸ್ಥೆ'). ಸರಕಾರವು ಅಧ್ಯಾಪಕರ ಸಂಬಳ, ಅವರ ಸೇವಾ ಅವಧಿ ಮತ್ತಿತರ ದುಡಿಮೆಯ ಷರತ್ತುಗಳನ್ನು ನಿರ್ಧರಿಸುತ್ತದೆ. ಆದರೆ ಒಂದು ಸ್ಪಷ್ಟ ಸಂಗತಿ ಏನೆಂದರೆ ಅಧ್ಯಾಪಕರು ಸರಕಾರದ ಆಡಳಿತ ವೈಖರಿಯಿಂದ ತೀವ್ರ ಪ್ರಭಾವಕ್ಕೆ ಒಳಗಾಗಿರುತ್ತಾರೆ ಎಂಬುದರಲ್ಲಿ ಅನುಮಾನವಿಲ್ಲ. ಅಧ್ಯಾಪಕರು ಸರಕಾರದ ವ್ಯಾಪ್ತಿಯಲ್ಲಿಯೇ ಬರುವ ಸಾಂಸ್ಥಿಕ ಸಂಹಿತೆ ಮತ್ತು ಆಚರಣೆಗಳ ನೆಲೆಯಲ್ಲೇ ಕಾರ್ಯನಿರ್ವಹಿಸುತ್ತಾರೆ. ಸರಕಾರ ಅಧ್ಯಾಪಕರನ್ನು ನಾನಾ ರೀತಿಯಲ್ಲಿ ಮೇಲ್ವಿಚಾರಣೆ ನಡೆಸುತ್ತದೆ ಮತ್ತು ಬೆಂಬಲಿಸುತ್ತದೆ. ಅದೇ ರೀತಿಯಲ್ಲಿ ಕೆಲವು ಸಕಾರಾತ್ಮಕ ಮತ್ತು ನಕಾರಾತ್ಮಕ ಉತ್ತೇಜನ ಮತ್ತು ಸೂಚನೆಗಳನ್ನು ನೀಡುತ್ತಿರುತ್ತದೆ. ಸರಕಾರದ ವ್ಯಾಪ್ತಿಯಲ್ಲೇ ಇರುವ ಈ ಸಾಂಸ್ಥಿಕ ಸಂಸ್ಕೃತಿ ಮತ್ತು ಆಚರಣೆಗಳು ಅಧ್ಯಾಪಕರ ಮೇಲೆ ಆಳವಾದ ಪ್ರಭಾವ ಬೀರುತ್ತವೆ. ಅದು ತರಗತಿಯ ಮೇಲೂ ಪ್ರಭಾವ ಬೀರುತ್ತದೆ. ಹಾಗಾಗಿ, ಅಧ್ಯಾಪಕರನ್ನು ಅರ್ಥ ಮಾಡಿಕೊಳ್ಳುವ ಸಂದರ್ಭದಲ್ಲಿ ಸರಕಾರದ ಕಾರ್ಯಶೈಲಿಯನ್ನು ಕೂಡಾ ಅರ್ಥ ಮಾಡಿಕೊಳ್ಳುವುದು ಮಹತ್ವದ್ದೇ ಆಗುತ್ತದೆ. ಭಾರತೀಯ ಸಂವಿಧಾನ ಒಂದು ಕಾನೂನು ಚೌಕಟ್ಟನ್ನು ನಿರ್ಮಿಸುತ್ತದೆ ಮತ್ತು ಅದರ ಪ್ರಕಾರವೇ ಸರ್ಕಾರ ಕಾರ್ಯನಿರ್ವಹಿಸುತ್ತದೆ. ನಮ್ಮ ಸಂವಿಧಾನವು ಸ್ಪಷ್ಟವಾಗಿ ಸಾಮಾಜಿಕ ಸಮಾನತೆಯನ್ನು ಬೆಂಬಲಿಸುತ್ತದೆ.

ಜಾತಿ, ಸಮುದಾಯ, ಲಿಂಗ ಇತ್ಯಾದಿಗಳ ಆಧಾರದಲ್ಲಿ ತಾರತಮ್ಯಕ್ಕೆ ನಮ್ಮ ಸಂವಿಧಾನದಲ್ಲಿ ಅವಕಾಶವಿಲ್ಲ. ಈ ಪ್ರಯತ್ನದ ಭಾಗವಾಗಿರುವ ಶಾಲಾ ಶಿಕ್ಷಣ ಸಾರ್ವತ್ರಿಕತೆಯನ್ನು ಬೇಡುವ ರೀತಿಯಲ್ಲೇ ರೂಪಿಸಲಾಗಿದೆ. ಪ್ರಾಥಮಿಕ ಶಿಕ್ಷಣ ಎನ್ನುವುದು ಮೂಲಭೂತ ಹಕ್ಕು ಎಂದು ಸಂವಿಧಾನವು ಕಡ್ಡಾಯ ಮಾಡಿದೆ. ದೇಶದ ಪ್ರತಿಯೊಂದು ಮಗುವೂ ಆ ಅವಕಾಶವನ್ನು ಪಡೆಯುವ ಹಕ್ಕನ್ನು ಹೊಂದಿದೆ. ಸ್ವಾತಂತ್ರ್ಯ ಸಿಕ್ಕಲ್ಲಿಂದ ಇಲ್ಲಿವರೆಗೆ ಸರಕಾರಿ ಶಾಲೆಗಳ ಪ್ರಸರಣ, ದೊಡ್ಡ ಸಂಖ್ಯೆಯಲ್ಲಿ ಅಧ್ಯಾಪಕರ ನೇಮಕಾತಿ–ಇವೆಲ್ಲ ಇದೇ ಸಾಂವಿಧಾನಿಕ ಒತ್ತಾಯವನ್ನೇ ಪ್ರತಿಫಲಿಸುತ್ತದೆ. ಈ ಅರ್ಥದಲ್ಲಿ ಸಂವಿಧಾನ ಹೇಳುವ ಸಾಮಾಜಿಕ ಗುರಿಗಳನ್ನು ಸಾಧಿಸಲು ಅಧ್ಯಾಪಕರು ಮುಖ್ಯ ಪಾತ್ರಧಾರಿಗಳಾಗಿದ್ದಾರೆ.

ಸೌಲಭ್ಯ ವಂಚಿತ ಗುಂಪುಗಳು ಮುಖ್ಯವಾಗಿ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಪರವಾಗಿ ಸಕರಾತ್ಮಕ ತಾರತಮ್ಯವನ್ನು ನಮ್ಮ ಸಂವಿಧಾನವು ಕಡ್ಡಾಯಗೊಳಿಸಿದೆ. ಎಸ್‌ಸಿ ಮತ್ತು ಎಸ್‌ಟಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನದಂತಹ ವಿಶೇಷ ಸೌಲಭ್ಯಗಳು, ಅಧ್ಯಾಪಕರಿಗೆ ಉದ್ಯೋಗಗಳಲ್ಲಿ ಮೀಸಲಾತಿ ನೀಡುವಲ್ಲಿ ಇವೆಲ್ಲ ಪ್ರತಿಫಲಿಸಿವೆ. ಇದಲ್ಲದೆ, ಸಂವಿಧಾನವು ವಿಸ್ತೃತವಾದ ಸರ್ಕಾರದ ರಚನೆಯನ್ನು ಮುಂದಿಡುತ್ತದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಅಧಿಕಾರದ ವ್ಯಾಖ್ಯಾನವನ್ನು ಮಾಡುತ್ತದೆ. ಶಿಕ್ಷಣ ಎನ್ನುವುದು ಎರಡೂ ಸರ್ಕಾರಗಳಿಗೆ ಸಂಬಂಧಿಸಿದ ವಿಷಯ. ಎರಡೂ ಹಂತದ ಸರ್ಕಾರಗಳು ಇಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ವಿಶಾಲ ನೀತಿ ವಿಷಯಗಳನ್ನು ಕೇಂದ್ರ ಸರ್ಕಾರ ನಿರ್ವಹಿಸಿದರೆ, ರಾಜ್ಯ ಸರ್ಕಾರವು ಹೆಚ್ಚಿನ ವಿಸ್ತೃತ ನೀತಿ ಮತ್ತು ಶಾಲೆಗಳ ಸಾಮಾನ್ಯ ಆಡಳಿತ ನಿರ್ವಹಣೆಯ ಬಗೆಗೆ ಮುತುವರ್ಜಿ ವಹಿಸುತ್ತದೆ.

ಉದಾಹರಣೆಗೆ ಕೇಂದ್ರ ಸರ್ಕಾರವು 'ಶಿಕ್ಷಣದ ಹಕ್ಕಿನ ಕಾಯ್ದೆ' (ಆರ್.ಟಿ.ಇ.)ಯನ್ನು ಶಾಸನವಾಗಿಸಿದರೆ, ರಾಜ್ಯ ಸರ್ಕಾರಗಳು ಕಾನೂನುಗಳನ್ನು ರಚಿಸಿ, ಅವುಗಳನ್ನು ಅನುಷ್ಠಾನಕ್ಕೆ ತರುವ ಜವಾಬ್ದಾರಿಯನ್ನು ಹೊಂದಿವೆ. ಕೇಂದ್ರ ಸರ್ಕಾರವು ಶಾಲಾ ಶಿಕ್ಷಣದ ಬೆಂಬಲಕ್ಕೆ ಅನುದಾನಗಳನ್ನು ಒದಗಿಸಿ ಸರ್ವಶಿಕ್ಷಾ ಅಭಿಯಾನದಂತಹ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಆದರೆ ಸಂಬಳ, ಕೆಲಸದ ಷರತ್ತುಗಳು, ತರಬೇತಿ, ಮೇಲ್ವಿಚಾರಣೆ ಮುಂತಾದ ಶಾಲೆಗಳ ಆಡಳಿತಕ್ಕೆ ಸಂಬಂಧಿಸಿದ ವಿಚಾರಗಳನ್ನು ರಾಜ್ಯ ಸರ್ಕಾರಗಳು ನೋಡುತ್ತವೆ. ಇದರ ಪರಿಣಾಮವಾಗಿ ಮೂಲಸೌಕರ್ಯ, ಶಿಕ್ಷಣಶಾಸ್ತ್ರಕ್ಕೆ ಸಂಬಂಧಿಸಿದ ಅಭ್ಯಾಸಗಳು ಮತ್ತು ಶಾಲಾ ಗುಣಮಟ್ಟ ಬೇರೆ ಬೇರೆ ರಾಜ್ಯಗಳಲ್ಲಿ ಭಿನ್ನ ಭಿನ್ನವಾಗಿರುತ್ತವೆ. ಪಂಚಾಯತ್‌ಗಳ ಅಧಿಕಾರ ವಿಕೇಂದ್ರೀಕರಣವನ್ನು ಸಂವಿಧಾನವು ರಾಜ್ಯಗಳಿಗೆ ಬಿಟ್ಟುಬಿಟ್ಟಿದೆ. ನಾನಾ ರಾಜ್ಯಗಳಲ್ಲಿ ಪಂಚಾಯತ್‌ಗಳ ಪಾತ್ರವು ಶಾಲೆಗಳಿಂದ ಶಾಲೆಗಳಿಗೆ ಭಿನ್ನವಾಗಿವೆ. ಎಲ್ಲ ರಾಜ್ಯಗಳಲ್ಲಿ ಅಲ್ಲದೇ ಇದ್ದರೂ ಕೂಡ ಅನೇಕ ಕಡೆಗಳಲ್ಲಿ ಪಂಚಾಯತುಗಳೇ ಶಿಕ್ಷಕರನ್ನು ನೇಮಕ ಮಾಡುತ್ತವೆ. ಒಟ್ಟಾರೆ ಕೇಂದ್ರ ಸರ್ಕಾರದ ಆದ್ಯತೆಯು ಅಧ್ಯಾಪಕರ ಮೇಲೆ ತಕ್ಕಮಟ್ಟಿನ ಪ್ರಭಾವ ಬಿದ್ದೇ ಬೀಳುತ್ತದೆ. ಆದರೆ ಅಧ್ಯಾಪಕರ ಮೇಲೆ ಪರಿಣಾಮ ಬೀರುವುದು ಮಾತ್ರ ರಾಜ್ಯ ಸರ್ಕಾರಗಳ ಕಾರ್ಯವೈಖರಿ.

ಸರ್ಕಾರಿ ಶಾಲೆಗಳಲ್ಲಿ ಕೆಲಸ ಮಾಡುವ ಅಧ್ಯಾಪಕರು ಒಂದೋ ರಾಜ್ಯ ಸರ್ಕಾರದ ಅಥವಾ ಪಂಚಾಯತ್ ನೌಕರರೋ ಆಗಿರುತ್ತಾರೆ. ಕೇಂದ್ರ ಸರ್ಕಾರ ನಡೆಸುವ ಕೇಂದ್ರೀಯ ವಿದ್ಯಾಲಯಗಳಲ್ಲಿ ಅಥವಾ ನವೋದಯ ಶಾಲೆಗಳಲ್ಲಿ ಮಾತ್ರ ಅಧ್ಯಾಪಕರು ಕೇಂದ್ರ ಸರ್ಕಾರದ ನೌಕರರು ಆಗಿರುತ್ತಾರೆ. ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳನ್ನು ರಾಜ್ಯ ಸರ್ಕಾರಗಳೇ ಸಿದ್ಧಗೊಳಿಸುತ್ತವೆ. ಮೇಲ್ವಿಚಾರಕರು ಮತ್ತು ಶಿಕ್ಷಕ ತರಬೇತುದಾರರು ಕೂಡ ರಾಜ್ಯ ಸರ್ಕಾರಗಳ ನೌಕರರೇ ಆಗಿರುತ್ತಾರೆ. ಇದರ ಕಾರಣದಿಂದಾಗಿ ಶಾಲೆಗಳಲ್ಲಿ ನೀಡಲಾಗುವ ಶಿಕ್ಷಣದ ರೀತಿಗಳು, ಅಧ್ಯಾಪಕರ ಸಂಬಳ, ಕೆಲಸದ ನಿಯಮ ಇತ್ಯಾದಿಗಳೆಲ್ಲ ರಾಜ್ಯದಿಂದ ರಾಜ್ಯಕ್ಕೆ ಬೇರೆಯೇಆಗಿರುತ್ತದೆ. ಭಾರತದಲ್ಲಿ ಶಾಲಾ ಶಿಕ್ಷಣವು ಮೇಲೆ ಹೇಳಿದ ಸಾಂವಿಧಾನಿಕ ಚೌಕಟ್ಟಿನಲ್ಲಿದೆ. ನಾವು ಹೊಂದಿರುವ ಸರ್ಕಾರದ ರೀತಿಯನ್ನು ಕೇವಲ ಸಂವಿಧಾನವೊಂದೇ ನಿರ್ಧರಿಸುವುದಿಲ್ಲ. ಉದಾಹರಣೆಗೆ, ಸಂವಿಧಾನವು ಸಾಮಾಜಿಕ ನ್ಯಾಯವನ್ನು ಉತ್ತೇಜಿಸುತ್ತದೆ ಮತ್ತು ನಿರ್ಲಕ್ಷ್ಯಕ್ಕೊಳಗಾದ ಗುಂಪುಗಳಿಗೆ ವಿಶೇಷ ಸವಲತ್ತುಗಳನ್ನು ಒದಗಿಸುತ್ತದೆ. ಇದು ಶಾಲೆಗಳ ವಿಸ್ತರಣೆಯನ್ನು ಹೇಳುತ್ತದೆಯೇ ಹೊರತು ಈ ಶಾಲೆಗಳು ಹೇಗೆ ಕಾರ್ಯ ನಿರ್ವಹಿಸಬೇಕು? ಯಾವ ರೀತಿಯ ಪಠ್ಯಪುಸ್ತಕಗಳನ್ನು ತಯಾರಿಸಬೇಕು? ಎಂತಹ ಶಿಕ್ಷಕ ತರಬೇತಿಯನ್ನು ನೀಡಬೇಕು ಎನ್ನುವುದನ್ನು ವಿವರಿಸುವುದಿಲ್ಲ. ಇವೆಲ್ಲ ಆಯಾ ಕಾಲದ ಸರ್ಕಾರದಿಂದ ಮತ್ತು ಅವುಗಳು ಅನುಸರಿಸುವ ನೀತಿಗಳಿಂದ ಪ್ರಭಾವಿತವಾಗಿರುತ್ತವೆ. ಇದರ ಜತೆಗೆ ಆಯಾ ಕಾಲದ ಸರ್ಕಾರ ಎನ್ನುವುದು ಆ ಸಂದರ್ಭದ ರಾಜಕೀಯ ವಿದ್ಯಮಾನಗಳನ್ನು, ಅಧಿಕಾರಿ ವರ್ಗ, ಸರ್ಕಾರದ ಒಳಗೇ ನಡೆಯುವ ಪ್ರಕ್ರಿಯೆಗಳೆನ್ನೆಲ್ಲ ಅವಲಂಬಿಸಿರುತ್ತದೆ.

ಜಗತ್ತಿನ ಅತ್ಯಂತ ದೊಡ್ಡ ಭಾರತೀಯ ಪ್ರಜಾಪ್ರಭುತ್ವವು ಯಾವತ್ತೂ ರಾಜಕೀಯ ವಿಜ್ಞಾನಿಗಳಿಗೆ ಆಕರ್ಷಣೆಯ ಕೇಂದ್ರ ಬಿಂದು. ಅತ್ಯಂತ ಕೆಳಮಟ್ಟದ ಸಾಮಾಜೋ–ಆರ್ಥಿಕ ಅಭಿವೃದ್ಧಿಇರುವ, ಅತ್ಯಂತ ಹೆಚ್ಚಿನ ಬಡತನ ಇರುವ ಸುಸ್ಥಿರ ಪ್ರಜಾಪ್ರಭುತ್ವವೊಂದು ಬೇರೆ ಇರಲಾರದು. ನಮ್ಮ ಪ್ರಜಾಪ್ರಭುತ್ವ ಎಂಬ ಕಾರಣಕ್ಕೆ ಸಮರ್ಥನೀಯ ಅಭಿಮಾನವನ್ನು ನಾವು ಹೊಂದಬಹುದಾದರೂ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿನ ಹಳೆಯ ಪ್ರಜಾಪ್ರಭುತ್ವಗಳಿಗೆ ಹೋಲಿಸಿದರೆ ಇದು ಪಡೆದುಕೊಂಡಿರುವ ವಿನ್ಯಾಸ ಭಿನ್ನ ಬಗೆಯದೇ ಆಗಿದೆ ಎನ್ನುವುದನ್ನು ನಾವು ಗುರುತಿಸಬೇಕಾಗಿದೆ. ನಮ್ಮ ರಾಜಕೀಯಕ್ಕೆ ಪರಸ್ಪರ ವಿರುದ್ಧವಾದ ಧೋರಣೆಗಳಿವೆ. ನಾಗರಿಕರ ಅಗತ್ಯಗಳಿಗೆ ಸ್ಪಂದಿಸುವವರಿದ್ದರೆ ಮಾತ್ರ ರಾಜಕಾರಣಿಗಳು ಚುನಾವಣೆ ಗೆಲ್ಲುವ ಭರವಸೆ ಇಟ್ಟುಕೊಳ್ಳಬಹುದು ಎನ್ನುವುದು ಒಂದು ಕಡೆಗಿದೆ. ಇದು ಅನೇಕ ಬಾರಿ ಶಾಲಾ ವ್ಯವಸ್ಥೆಯ ವಿಸ್ತರಣೆಯಂತಹ ಪ್ರಬಲ ಕ್ರಮಗಳಿಗೆ ಕಾರಣವಾಗುತ್ತದೆ. ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳ ಸೌಲಭ್ಯ, ಮಧ್ಯಾಹ್ನದೂಟ, ವಿದ್ಯಾರ್ಥಿ ವೇತನದಂತಹ ಉಪಕ್ರಮಗಳೂ ಇದರ ಭಾಗವಾಗಿಯೇ ಜಾರಿಗೆ ಬರುವುದಿದೆ. ಆದರೆ ನಮ್ಮ ರಾಜಕೀಯ ಎನ್ನುವುದು ದೈತ್ಯ ಭ್ರಷ್ಟಾಚಾರ ಮತ್ತು ಅಧಿಕಾರಶಾಹಿ ವ್ಯವಸ್ಥೆಯನ್ನೂ ಬೆಳೆಸುತ್ತದೆ. ಭಾರತೀಯರು ಸರ್ಕಾರಕ್ಕಾಗಿ ಮತ ಚಲಾಯಿಸಬಹುದು. ಆದರೆ ಅವರ ದೈನಂದಿನ ಬದುಕಿನಲ್ಲಿ ದೊಡ್ಡ ಮಟ್ಟಿನ ಭ್ರಷ್ಟಾಚಾರವನ್ನು ಮತ್ತು ಪ್ರಜಾಪ್ರಭುತ್ವ ಅಲ್ಲದ ಕಾರ್ಯಶೈಲಿಯನ್ನು ಎದುರಿಸುತ್ತಾರೆ. ಅಧ್ಯಾಪಕರೂ ಒಳಗೊಂಡಂತೆ ಭಾರತದಲ್ಲಿರುವ ಎಲ್ಲ ಸರ್ಕಾರಿ ಸೇವಕರೂ ರಾಜಕೀಯ ಚಲನಶೀಲತೆಯ ಪರಿಣಾಮಕ್ಕೆ ಒಳಗಾದವರೇ ಆಗಿದ್ದಾರೆ. ಒಂದು ಕಡೆಯಲ್ಲಿ ಅವರು ಬಡವರ ಪರ ಅನೇಕ ನೀತಿಗಳನ್ನು ಅನುಷ್ಠಾನಕ್ಕೆ ತರುತ್ತಿದ್ದಾರೆ. ಇನ್ನೊಂದೆಡೆ ಒಳ್ಳೆಯ ಕೆಲಸವನ್ನು ಉತ್ತೇಜಿಸದ ಮತ್ತು ಗುರುತಿಸದ ಸಾಂಸ್ಥಿಕ ಸಂಸ್ಕೃತಿಯಲ್ಲಿ ಇದೆಲ್ಲವನ್ನೂ ಮಾಡುತ್ತಾ ಇರುತ್ತಾರೆ. ಹಾಗಾಗಿ ನೀತಿಗಳ ನಿಜವಾದ ಅನುಷ್ಠಾನ ಎನ್ನುವುದು ಅತೃಪ್ತಿಕರವಾಗಿರುತ್ತದೆ. ರಾಜಕೀಯ ನಂಟು ಹೊಂದಿದ ಅಧ್ಯಾಪಕರು ತಮಗೆ ಬೇಕಾದಕಡೆ ಪೋಸ್ಟಿಂಗ್ ಪಡೆಯುವ ಆಯ್ಕೆಯನ್ನು ಹೊಂದಿರುತ್ತಾರೆ ಮತ್ತು ಕೆಟ್ಟದಾಗಿ ಪಾಠ ಮಾಡುತ್ತಾರೆ. ಅಥವಾ ಪಾಠವನ್ನೇ ಮಾಡುವುದಿಲ್ಲ. ಅವರ ಮೇಲಣ ಪರಿಣಾಮ ಎನ್ನುವುದು ಅಷ್ಟಕ್ಕಷ್ಟೇ. ತದ್ವಿರುದ್ಧವಾಗಿ, ವೃತ್ತಿನಿಷ್ಠ ಅಧ್ಯಾಪಕರು ವ್ಯವಸ್ಥೆಯ ಒಳಗೆ ಗುರುತಿಸಲ್ಪಡದೇ ಇರಬಹುದು. ಅಥವಾ ಕೆಲವೊಮ್ಮೆ ಕಷ್ಟಕರ ಪ್ರದೇಶಗಳಲ್ಲಿ ನಿರಂತರ ಪೋಸ್ಟಿಂಗ್ ಸಿಗುವಂತಹ ಕಷ್ಟಗಳನ್ನು ಎದುರಿಸಬಹುದು. ಇದು ವೃತ್ತಿಯನ್ನು ಅಪಮೌಲ್ಯೀಕರಿಸುವ ಸಾಂಸ್ಥಿಕ ಸಂಸ್ಕೃತಿಯೊಂದನ್ನು ಸೃಷ್ಟಿಸುತ್ತಾ ಇರುತ್ತದೆ. ಇದು ಅಧ್ಯಾಪಕರನ್ನೂ

ಒಳಗೊಂಡಂತೆ ಸರ್ಕಾರದಲ್ಲಿರುವ ಜನರ ಮೇಲೆ ಪರಿಣಾಮವನ್ನು ಬೀರುತ್ತದೆ. ಅವರ ಸ್ಫೂರ್ತಿಯ ಸೆಲೆಯನ್ನೇ ಇಲ್ಲದಾಗಿಸುತ್ತದೆ. ಭಾರತೀಯ ಅಧಿಕಾರಶಾಹಿಯ ಸ್ವಭಾವ ಕೂಡ ಅನೇಕ ಮುಖ್ಯ ಪರಿಣಾಮಗಳನ್ನು ಬೀರುತ್ತಾ ಇರುತ್ತದೆ. ನಮ್ಮ ಅಧಿಕಾರಶಾಹಿ ಕರಾರುವಕ್ಕಾದ ವೃತ್ತಿಪರತೆಯಿಂದ ಕೂಡಿದ್ದಲ್ಲ. ಉದಾಹರಣೆಗೆ, ಶಾಲಾ ಮೇಲ್ವಿಚಾರಕರೋ ಅಥವಾ ಅಧ್ಯಾಪಕ ತರಬೇತಿದಾರರೋ ಸೇವಾಪೂರ್ವದಲ್ಲಿ ಅಥವಾ ಸೇವೆಯಲ್ಲಿ ತಮ್ಮ ವೃತ್ತಿಗೆ ಸಂಬಂಧಿಸಿದಂತೆ ಸೂಕ್ತ ತರಬೇತಿ ಪಡೆದವರಲ್ಲ. ಇದಕ್ಕೂ ಮಿಗಿಲಾಗಿ ಯಾವುದಾದರೂ ವ್ಯಕ್ತಿ ನಿರ್ದಿಷ್ಟ ಹುದ್ದೆಯನ್ನು ಅಲಂಕರಿಸಿದ್ದರೆ ಅದಕ್ಕೆ ಅವರ ಅತ್ಯುತ್ತಮ ವೃತ್ತಿಪರತೆ ಕಾರಣವಾಗಿರದೆ, ಆ ವ್ಯಕ್ತಿಗೆ ನಿರ್ದಿಷ್ಟ ಆಶ್ರಯದಾತರು ಸಿಕ್ಕಿದ್ದೋ, ಅಥವಾ ಆ ಹುದ್ದೆ ದೊರಕಿಸಿಕೊಳ್ಳುವುದಕ್ಕೆ ದುಡ್ಡು ಕೊಟ್ಟದ್ದೋ ಕಾರಣವಾಗಿರುತ್ತದೆ. ಇದರ ಪರಿಣಾಮ ನಮಗೆ ಒಳ್ಳೆಯ ಮೇಲ್ವಿಚಾರಕರು ಮತ್ತು ಅತ್ಯುತ್ತಮ ಅಧ್ಯಾಪಕರು ಸಿಗದೇ ಹೋಗುತ್ತಾರೆ. ಇನ್ನೂ ಹೆಚ್ಚಾಗಿ, ಆಶ್ರಯ ಅಥವಾ ಹಣದ ಕಾರಣ ಒಬ್ಬ ವ್ಯಕ್ತಿ ಹುದ್ದೆಯನ್ನು ಪಡೆದುಕೊಂಡ ಬಳಿಕ ಆತನಿಗೆ ತನ್ನ ವೃತ್ತಿಯ ಬಗೆಗಿನ ಪ್ರೇರಣೆ–ಒಲವು ಅಲ್ಪಮಟ್ಟದ್ದಾಗಿರುತ್ತದೆ. ಇದರ ಅರ್ಥ ಏನೆಂದರೆ ತರಬೇತಿದಾರರು, ಮತ್ತು ಮೇಲ್ವಿಚಾರಕರು ಅಧ್ಯಾಪಕರಿಗೆ ಪೂರಕವಾದ ವಾತಾರಣ ನಿರ್ಮಿಸುವ ಸಾಮರ್ಥ್ಯ ಹೊಂದಿರುವುದಿಲ್ಲ. ಇದರ ಪ್ರತಿಕೂಲ ಪರಿಣಾಮ ಎಲ್ಲ ಅಧ್ಯಾಪಕರ ಪ್ರೇರಣೆ ಮತ್ತು ಮೇಲೆ, ನೈತಿಕತೆಯ ಮೇಲೆ ಉಂಟಾಗುತ್ತದೆ.

ಭಾರತದ ಅರ್ಥ ವ್ಯವಸ್ಥೆಯು 1990ರ ಮಧ್ಯಭಾಗದ ನಂತರ ತ್ವರಿತಗತಿಯಲ್ಲಿ ಬೆಳವಣಿಗೆ ಹೊಂದಿದ ಕಾರಣ ಸರ್ಕಾರದ ಆದಾಯದಲ್ಲಿ ಹೆಚ್ಚಳ ಉಂಟಾಯಿತು. 1950–60ರಲ್ಲಿ ಇದ್ದದ್ದಕ್ಕಿಂತ ಹೆಚ್ಚು ಹಣ ಸರ್ಕಾರದಲ್ಲಿ ಇದೆ. ಈ ಕಾರಣದಿಂದ ಸಾಂವಿಧಾನಿಕ ಕಡ್ಡಾಯದ ಕಾರಣ ಸರ್ಕಾರವು ಶಾಲಾ ವ್ಯವಸ್ಥೆಯನ್ನು ವಿಸ್ತರಿಸುವುದು ಸಾಧ್ಯವಾಗಿದೆ. ಆದರೆ ಅನೇಕ ರಾಜಕೀಯ ವಿಜ್ಞಾನಿಗಳು ದಾಖಲುಗೊಳಿಸಿದ ಹಾಗೆ ಕಳೆದ ಮೂರು ದಶಕಗಳಿಂದ ಆಶ್ರಯ ಮತ್ತು ಧನ ಬಲದ ಪ್ರಭಾವವೂ ಸರ್ಕಾರದಲ್ಲಿ ಹೆಚ್ಚುತ್ತಲೇ ಇದೆ. ವ್ಯಂಗ್ಯ ಎಂದರೆ ಸ್ವಾತಂತ್ರ್ಯಾನಂತರ ಭಾರತವು ಅತ್ಯಂತ ಕೆಳಸ್ತರದ ಸಂಪನ್ಮೂಲ ತಳಗಟ್ಟಿನಿಂದ ಆರಂಭಗೊಂಡಿತು. ಆದರೆ ಕ್ರಿಯಾಶೀಲ ಸರ್ಕಾರ ಇತ್ತು. ಈಗಿನ ಸರ್ಕಾರಿ ಶಾಲೆಗಳಿಗೆ ಹೋಲಿಸಿದರೆ ಆಗ ಅವುಗಳ ಕಾರ್ಯನಿರ್ವಹಣೆ ಉತ್ತಮವಾಗಿದ್ದವು, ಆದರೆ ಆಗ ಅವುಗಳ ಸಂಖ್ಯೆ ಕಡಿಮೆಯಿತ್ತು. ಅಧ್ಯಾಪಕರ ಸಂಖ್ಯೆ ಕೂಡ ಕಡಿಮೆ ಇತ್ತು. ಆದರೆ ಇದ್ದ ಕೆಲವೇ ಮಂದಿ ತಮ್ಮ ಜವಾಬ್ದಾರಿಯನ್ನು ಅಗತ್ಯಕ್ಕಿಂತ ಹೆಚ್ಚು ಗಂಭೀರವಾಗಿಯೇ ಪರಿಗಣಿಸಿದ್ದರು. ಸರ್ಕಾರದ ಬಳಿ ಹಣದ ಲಭ್ಯತೆ ಅಧಿಕವಾಗುತ್ತಿದ್ದಂತೆ, ಸರ್ಕಾರದ ಕಾರ್ಯನಿರ್ವಹಣೆ ಹದಗೆಡುತ್ತಾ ಹೋಯಿತು. ಹಾಗಾಗಿ ನಮ್ಮಲ್ಲಿ ಶಾಲೆಗಳ ಸಂಖ್ಯೆ ಹೆಚ್ಚಿದ್ದರೂ ಕೂಡ ಅವುಗಳ ಕಾರ್ಯನಿರ್ವಹಣೆ ಕೆಳಮಟ್ಟದಲ್ಲೇ ಇದೆ.

ಇಲ್ಲಿ ಉಲ್ಲೇಖಿಸಲೇ ಬೇಕಾದ ಇನ್ನೊಂದು ಅಂಶ ಎಂದರೆ, 1980ರಿಂದ ಜಗತ್ತಿನಾದ್ಯಂತ, ಸಾರ್ವಜನಿಕ ಆಡಳಿತದ ಬಗ್ಗೆ ಗಂಭೀರವಾದ ಮರುಚಿಂತನೆಗಳು ನಡೆಯುತ್ತಾ ಇವೆ. ಮತ್ತು ಹೊಸ 'ನ್ಯೂ ಪಬ್ಲಿಕ್ ಮ್ಯಾನೇಜ್‌ಮೆಂಟ್' (ಎನ್‌ಪಿಎಂ) ಎನ್ನುವ ಚಿಂತನೆ ಹುಟ್ಟಿಕೊಂಡಿದೆ. ಪೂರ್ಣಕಾಲಿಕ ಸರ್ಕಾರಿ ನೌಕರರನ್ನು ಹೊಂದುವ ಬದಲು, ಗುತ್ತಿಗೆಯಾಧಾರದಲ್ಲಿ ನೌಕರರನ್ನು ನೇಮಕ ಮಾಡುವ ಪ್ರವೃತ್ತಿ ಬೆಳೆದುಕೊಂಡು ಬಂದಿದೆ. ಕೆಲಸಗಳನ್ನು ಹೊರಗುತ್ತಿಗೆ ಕೊಡುವ ವ್ಯವಸ್ಥೆ ಬಂದಿದೆ. ಅನೇಕ ರಾಜ್ಯಗಳಲ್ಲಿ ಪರ್ಯಾಯ ಶಿಕ್ಷಕರನ್ನು ದೊಡ್ಡ ಮಟ್ಟದಲ್ಲಿ ಗುತ್ತಿಗೆಗೆ ಪಡೆಯುವ ಆಲೋಚನೆಯು ತನ್ನ ಪ್ರಭಾವವನ್ನು ಬೀರುತ್ತದೆ. ಸ್ವಾತಂತ್ರ್ಯದ ಸಂದರ್ಭದಲ್ಲಿ ಸರ್ಕಾರದ ಗಾತ್ರ ಹಿಗ್ಗಿಸುವುದು ಮತ್ತು ಪೂರ್ಣಕಾಲಿಕ ಅಧಿಕಾರಿಗಳನ್ನು ಹೊಂದುವುದು ವ್ಯಾಪಕವಾಗಿ ಸ್ವೀಕಾರಾರ್ಹ ಆಗಿತ್ತು. 1990ರ ನಂತರ ಇದೆಲ್ಲ ಪ್ರಶ್ನಾರ್ಹ ಆಯಿತು. ಇದು ಕೆಲಸದ ಪರಿಸ್ಥಿತಿಯನ್ನು ಆಮೂಲಾಗ್ರವಾಗಿ ಬದಲಾಯಿಸಿತು. ಇದರ ಪರಿಣಾಮ ಭಾರತದ ಅಧ್ಯಾಪಕರ ಕಾರ್ಯ ಶೈಲಿ ಎನ್ನುವುದು ಬದಲಾಗಿ ಹೋಯಿತು. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಪ್ರಬುದ್ಧ ಪ್ರಜಾಪ್ರಭುತ್ವದ ಸಂದರ್ಭದಲ್ಲಿ ಈ ಎನ್‌ಪಿಎಂಗಳು ತಮ್ಮ ಬೇರುಗಳನ್ನು ಹೊಂದಿದುವು ಎನ್ನುವುದು ಇಲ್ಲಿ ಗಮನಾರ್ಹ. ಆದರೆ ಹೊಸ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದರ ರೀತಿಯೇ ಬೇರೆ. ಅಧ್ಯಾಪಕರ ವೃತ್ತಿ ಪರಿಸ್ಥಿತಿಗಳಲ್ಲಿ ಆಶ್ರಯ ಮತ್ತು ಭ್ರಷ್ಟತೆಯ ಪಾತ್ರವನ್ನು ಇದು ಹೆಚ್ಚಿಸಿದೆಯೇ ಎಂದು ನಾವು ಪರೀಕ್ಷಿಸಬೇಕು. ಒಟ್ಟಾರೆ ಹೇಳಬೇಕೆಂದರೆ ಅಧ್ಯಾಪಕರು ಮತ್ತು ಅವರ ಕೆಲಸ ಎರಡೂ ಸರ್ಕಾರದ ಸಂದರ್ಭದಲ್ಲೇ ಇರುತ್ತವೆ. ಈ ಸರ್ಕಾರವನ್ನು, ನಮ್ಮ ಸಂವಿಧಾನ, ರಾಜಕೀಯ ಮತ್ತು ಅಧಿಕಾರಿ ವರ್ಗ ರೂಪಿಸಿರುತ್ತದೆ. ಸರ್ಕಾರ ಬದಲಾದ ಹಾಗೆ ಅದಕ್ಕೆ ಸಮಾನಾಂತರವಾಗಿ ಅಧ್ಯಾಪಕರ ಮೇಲೆ ಆಗುವ ಪರಿಣಾಮ ದೃಷ್ಟಿಗೋಚರವೇ ಆಗಿದೆ. ಅಧ್ಯಾಪಕರನ್ನು ಅರ್ಥೈಸಿಕೊಳ್ಳಬೇಕು ಎಂದರೆ ನಾವು ಶೈಕ್ಷಣಿಕ ನೀತಿ ಮತ್ತು ಅಭ್ಯಾಸಗಳನ್ನಷ್ಟೇ ಅಲ್ಲ, ಸರ್ಕಾರವನ್ನೂ ಅರ್ಥೈಸಿಕೊಳ್ಳಬೇಕಾಗಿದೆ. ಸರ್ಕಾರದ ಮುಖ್ಯ ಅಂಶಗಳನ್ನು ಈಗಾಗಲೇ ಮೇಲೆ ವಿವರಿಸಲಾಗಿದೆ. ಆದರೆ ಅಧ್ಯಾಪಕರನ್ನು ಸಂಪೂರ್ಣ ಅರ್ಥೈಸಿಕೊಳ್ಳುವುದಕ್ಕೆ, ಬೆಂಬಲಿಸುವುದಕ್ಕೆ ನಾವು ನಿಜವಾಗಿಯೂ ಸರ್ಕಾರವನ್ನು ವಿಸ್ತೃತವಾಗಿ ಗ್ರಹಿಸಬೇಕಾಗಿದೆ.

ರಶ್ಮಿ ಅವರು ಮಧ್ಯಪ್ರದೇಶ ಕೇಡರ್‌ನ 1984ರ ಬ್ಯಾಚ್‌ನ ಭಾರತೀಯ ಆಡಳಿತ ಸೇವೆಯ ಅಧಿಕಾರಿ. ಅವರು ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಅವರು ಅನೇಕ ವರ್ಷಗಳನ್ನು ಶಾಲಾಶಿಕ್ಷಣ ಮತ್ತು ಪಂಚಾಯತಿ ರಾಜ್ ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುತ್ತಾ ಕಳೆದಿದ್ದಾರೆ. ಅವರು ಎರಡು ಕೃತಿಗಳನ್ನು ಬರೆದಿದ್ದು, 'ಲೋಕಲ್ ಗವರ್ನ್‌ಮೆಂಟ್ ಇನ್ ಇಂಡಿಯಾ: ಪಾಲಿಸಿ ಅಂಡ್ ಪ್ರಾಕ್ಟೀಸ್' ಮತ್ತು 'ದಿ ಎಲಿಮೆಂಟರಿ ಎಜುಕೇಶನ್ ಸಿಸ್ಟಮ್ ಇನ್ ಇಂಡಿಯಾ' (ವಿಮಲಾ ರಾಮಚಂದ್ರನ್ ಜತೆಗೆ ಸಹಸಂಪಾದಕಿ). ಅದೇ ರೀತಿಯಲ್ಲಿ ಶಿಕ್ಷಣ ಮತ್ತು ಸ್ಥಳೀಯ ಆಡಳಿತದ ಬಗೆಗೆ ಅನೇಕ ಲೇಖನಗಳನ್ನು ಬರೆದಿದ್ದಾರೆ.

ಅವರನ್ನುಇಲ್ಲಿ rashmishuklasharma@gmail.com ಸಂಪರ್ಕಿಸಬಹುದು.